## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.

**ಸಿಸಿ ನಂ.942/2024**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಮಳಖೇಡ ಪೊಲೀಸ್ ಠಾಣೆ,

-ಃಃ ವಿರುದ್ಧ ಃಃ-

ಆರೋಪಿ ಃ ಚಂದ್ರಶೇಖರ ತಂದೆ ಬಸವಣ್ಣ ಬಿರಾದಾರ
ವಃ 52 ವರ್ಷ, ಉಃ ವ್ಯಾಪಾರ/ಒಕ್ಕಲುತನ
ಸಾಃ ಹಂಗನಳ್ಳಿ ಗ್ರಾಮ, ತಾಃ ಸೇಡಂ, ಜಿಃ ಕಲಬುರಗಿ

----

### ದೋ ಷಾ ರೋ ಪ ಣೆ

ನಾನು ಶ್ರೀ ಬಾಲು, ಬಿಎ., ಎಲ್.ಎಲ್.ಬಿ., ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಯವರು, ಸೇಡಂ, ನಿಮ್ಮ ಮೇಲೆ ಹೊರಿಸುವ ಆರೋಪವೇನೆಂದರೆ,

ದಿನಾಂಕ 21-11-2023 ರಂದು ಸಾಯಂಕಾಲ 07-30 ಗಂಟೆ ಸುಮಾರಿಗೆ ಮಳಖೇಡ ಪೋಲೀಸ ಠಾಣೆಯ ಹದ್ದಿಯ ಸ್ಟೇಷನ ತಾಂಡದ ಜಮಕಾ ವೈನ್ಸನ್ನು ಚಾಸಾ 1 ನೇದ್ದವರು ತಪಾಸಣೆ ಮಾಡುತ್ತಿರುವಾಗ ಆರೋಪಿತನು ಸರಕಾರಿ ಜೀಪ ನಂ. ಕೆಎ -32/ಜಿ-1203 ನೇದ್ದರ ಬಾನೆಟ ಮೇಲೆ ಮಧ್ಯ ಮಿಶ್ರಿತ ನೀರಿನ ಬಾಟಲಿ ಇಟ್ಟು ಮಧ್ಯ ಸೇವನೆ ಮಾಡುತ್ತ ಸೀಗರೇಟ್ ಸೇದುತಿದ್ದಾಗ ಚಾಸಾ 1 ನೇದ್ದವರು ನಾನು ಕರ್ತವ್ಯಕ್ಕೆ ಹೋಗಬೇಕು ಸರಿ ಅಂತಾ ಆರೋಪಿತನಿಗೆ ಹೇಳಿದರೂ ಸರಿಯದೆ ಪೋಲೀಸ ಕರ್ತವ್ಯಕ್ಕೆ ಅಡ್ಡಿ ಪಡಿಸಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. ಕಲಂ 353 ಅಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಎರಡನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ ಆರೋಪಿತನು ಚಾಸಾ 1 ನೇದ್ದವರಿಗೆ ಅವಾಚ್ಯ ಶಬ್ದಗಳಿಂದ ಬೈಯುತ್ತಾ ಕೊರಳ ಪಟ್ಟಿ ಹಿಡಿದು ಎಳೆದಾಡಿ ಕೈಯಿಂದ ಹಲ್ಲೆ ಮಾಡಿದ್ದು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ. 332 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಮೂರನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತನು  ಸರಕಾರಿ ಜೀಪ ನಂ. ಕೆಎ -32/ಜಿ-1203 ನೇದ್ದರ ಬಾನೆಟ ಮೇಲೆ ಮದ್ಯ ಮಿಶ್ರಿತ ನೀರಿನ ಬಾಟಲಿ ಇಟ್ಟು ಮದ್ಯ ಸೇವನೆ ಮಾಡುತ್ತ ಸೀಗರೇಟ್ ಸೇದುತಿದ್ದಾಗ ಚಾಸಾ.1 ನೇದ್ದವರು ಇದು ಕಾನೂನಿನ ಉಲ್ಲಂಘನೆ ಆಗುತ್ತದೆ ಎಂದು ಹೇಳಿದಾಗ ಆರೋಪಿತನು ಚಾಸಾ 1 ನೇದ್ದವರಿಗೆ ತಡೆದು ನಿಲ್ಲಿಸಿದ್ದು ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.341 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕೊನೆಯದಾಗಿ ಮೇಲೆ ಹೇಳಲಾದ ದಿನ, ಸಮಯ ಮತ್ತು ಸ್ಥಳದಲ್ಲಿ , ಆರೋಪಿತನು ಚಾಸಾ .1 ನೇದ್ದವರಿಗೆ ನೀನು ಯಾವನೋ ಹೇಳೋಕೆ ಭೋಸಡಿ ಮಗನೆ ಅಂತಾ ಅವಾಚ್ಯ ಶಬ್ದಗಳಿಂದ ಬೈದು ಸಾರ್ವಜನಿಕ ಶಾಂತತೆಗೆ ಭಂಗ ಉಂಟು ಮಾಡಿದ್ದು, ಆ ಮೂಲಕ ಆರೋಪಿತರಾದ ನೀವು ಭಾ.ದಂ.ಸಂ.504 ರಡಿಯಲ್ಲಿ ಶಿಕ್ಷಾರ್ಹ ಅಪರಾಧಗಳನ್ನು ಮಾಡಿರುತ್ತೀರಿ, ಅದು ನನ್ನ ಸಂಜ್ಞೆತೆಗೆ ಬಂದಿರುತ್ತದೆ.

ಕಾರಣ ಮೇಲೆ ಹೇಳಿದ ಅಪರಾಧಗಳಿಗಾಗಿ ವಿಚಾರಣೆ ಎದುರಿಸಬೇಕೆಂದು ನಿರ್ದೇಶಿಸುತ್ತಿದ್ದೇನೆ.

ಸಹಿ/-

ದಿನಾಂಕಃ 30-01-2025 ಪ್ರ.ದ.ನ್ಯಾದಂ. ಸೇಡಂ.

## <u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಸೇಡಂ.</u>

**<u>ಸಿಸಿ ನಂ.942/2024</u>**

ಫಿರ್ಯಾದಿಃ ಕರ್ನಾಟಕ ಸರಕಾರ ಪರಃ ಮಳಖೇಡ ಪೊಲೀಸ್ ಠಾಣೆ,

-ಃಃ ವಿರುದ್ಧ ಃಃ-

ಆರೋಪಿ ಃ ಚಂದ್ರಶೇಖರ ತಂದೆ ಬಸವಣ್ಣ ಬಿರಾದಾರ
ವಃ 52 ವರ್ಷ, ಉಃ ವ್ಯಾಪಾರ/ಒಕ್ಕಲುತನ
ಸಾಃ ಹಂಗನಳ್ಳಿ ಗ್ರಾಮ, ತಾಃ ಸೇಡಂ, ಜಿಃ ಕಲಬುರಗಿ

### <u>ಆರೋಪಿತರ ಹೇಳಿಕೆ</u>

ಪ್ರಃ-1) ಈ ಓದಿ ಹೇಳಲಾದ ದೋಷಾರೋಪಣೆಯನ್ನು ಕೇಳಿ ತಿಳಿದುಕೊಂಡಿರುವಿರಾ?

ಉಃ-

ಪ್ರಃ-2) ನಿಮ್ಮ ತಪ್ಪನ್ನು ಒಪ್ಪಿಕೊಳ್ಳುತ್ತಿರೊ ಅಥವಾ ವಿಚಾರಣೆ ನಡೆಯಬೇಕಾ?

ಉಃ-

(ದೋಷಾರೋಪಣೆಯನ್ನು ಆರೋಪಿತರಿಗೆ ಓದಿ ಹೇಳಿದ್ದು, ಅವರು ನೀಡಿದ ಹೇಳಿಕೆಯನ್ನು ಯಥಾವತ್ತಾಗಿ ದಾಖಲಿಸಿದ್ದು, ಅದು ಸಂಪೂರ್ಣ ಸತ್ಯವಾಗಿರುತ್ತದೆಂದು ಪ್ರಮಾಣೀಕರಿಸುತ್ತೇನೆ)

ಸಹಿ/-

ದಿನಾಂಕಃ 30-01-2025 ಪ್ರ.ದ.ನ್ಯಾದಂ. ಸೇಡಂ.